

ಮೂಲಕ, ಯಾವುದೋ ಹಾಲಿವುಡ್ ಆ್ಯಕ್ಷನ್ ಸಿನೆಮಾದಲ್ಲಿ ಇದ್ದಕಿದ್ದಂತೆ ಬಂದ ‘ಆರ್ ಯೂ ಫಕಿಂಗ್ ಗಾಂಡಿ?’ ಎಂಬ ಅನಿರೀಕ್ಷಿತ ಉದ್ಧರಣೆಯ ಮೂಲಕವೇ ಗಾಂಧಿಜಿ ನನಗೆ ಪರಿಚಯವಾಗಿದ್ದು.

ಇತ್ತೀಚೆಗೆ ಗಾಂಧಿಯವರ ‘ಹಿಂದ್‌ಸ್ವರಾಜ್’ ಪುಸ್ತಕ ಓದಿದಾಗ ಇನ್ನೊಂದು ಬಗೆಯ ಅಚ್ಚರಿಯುಂಟಾಯಿತು. ಕ್ರಿ.ಶ. 1908ರಲ್ಲಿ, ಇಂದಿಗೆ ನೂರು ವರ್ಷಗಳಿಗೂ ಮುಂಚೆ ಬರೆದ ಆ ಪುಸ್ತಕದಲ್ಲಿ ‘ಆಧುನಿಕತೆ ಎಂಬುದೇ ಶಾಪ’, ‘ಭಾರತವು ಮುಂದುವರೆಯಬೇಕಾದಲ್ಲಿ ತನ್ನ ಬೇರುಗಳನ್ನು ಮರೆಯಬಾರದು, ಯಂತ್ರಗಳನ್ನು ದೂರವಿಡಬೇಕು’, ‘ರೈಲು, ವೈದ್ಯ, ವಕೀಲರು ನಮಗೆ ದೊರೆತ ಸಾಧನಗಳಲ್ಲ, ಶಾಪಗಳು’ ಎಂಬ ಮಾತುಗಳಿದ್ದವು. ಇವತ್ತು ಪರಿಸರವು, ಅವ್ಯಾಹತವಾಗಿ ಯದ್ವಾತದ್ವಾ ನಾಶವಾಗುತ್ತಿರುವಾಗ, ಸಮತೂಕದ ಬದುಕು **(sustainable living)** ಎಂಬ ಮಾತುಗಳು ಕೇಳಿ ಬರುತ್ತಿರುವ ಸಂದರ್ಭದಲ್ಲಿ ‘ಅರೆ, ಗಾಂಧಿ ಹೇಳಿದ್ದು ಹೌದಲ್ಲ. ಅವತ್ತೇ ನಾವವರನ್ನು ಒಪ್ಪಿಕೊಂಡಿದ್ದರೆ ಬೇರೆಯದೇ ಸ್ಥಿತಿಯಲ್ಲಿರುತ್ತಿದ್ದವಲ್ಲ’ ಎನಿಸಿದ್ದು ಸತ್ಯ. ಆದರೆ ಭಾರತದ ಸಮಸ್ಯೆಗಳು ಬೇರೆಯದೇ ಇದ್ದ, ಜಾತಿ ಸಮಸ್ಯೆಯಲ್ಲಿ ನಲುಗುತ್ತಿದ್ದ ಸಮಾಜಕ್ಕೆ ಬ್ರಿಟಿಷ್ ಶಿಕ್ಷಣ ಔಷಧದ ರೂಪದಲ್ಲಿ ಕೆಲಸ ಮಾಡುತ್ತಿದ್ದ ಆ ಸಂದರ್ಭದಲ್ಲಿ ಗಾಂಧಿ ಹೇಳಿದ್ದು ಬೇರೆ ರೀತಿಯಲ್ಲಿ, ಇನ್ನೂ ಆಳವಾದ, ಗಹನವಾದ ರೀತಿಯಲ್ಲಿರಬೇಕು.

‘ಹಿಂದ್‌ಸ್ವರಾಜ್’ ಪುಸ್ತಕವನ್ನು ಬರೆದ ಮೂವತ್ತು, ನಲ್ವತ್ತು ವರ್ಷಗಳ ನಂತರ ಸ್ವಾತಂತ್ರ್ಯ ಚಳವಳಿ, ಗಾಂಧಿಯವರ ಸಮಾಜ ಸುಧಾರಣ ಚಳವಳಿಗಳು ಬೇರೆ ಬೇರೆ ಹಂತವನ್ನು ತಲುಪಿ ಭಾರತವು ಇನ್ನೊಂದೇ ಮಗ್ಗುಲಿಗೆ ಹೊರಳಿದಾಗ ಗಾಂಧಿಯವರು ನೆಹರೂರವರಿಗೆ ಪತ್ರ ಬರೆದು ಈ ಪುಸ್ತಕದ ಬಗ್ಗೆ ಮತ್ತೆ ನೆನಪಿಸುತ್ತಾರೆ. ಇದು ಬರೆದು ಮೂವತ್ತು ವರ್ಷಗಳಾದರೂ ತಮ್ಮ ನಿಲುವಿನಲ್ಲಿ ಕಿಂಚಿತ್ತೂ ವ್ಯತ್ಯಾಸವಿಲ್ಲೆಂದೂ, ತಾವು ಅದನ್ನು ಮತ್ತೆ ಓದಿ ಜಾರಿಗೆ ತರಬೇಕೆಂದೂ ಹೇಳುತ್ತಾರೆ. ಅದನ್ನು ಬಹಳ ಹಿಂದೆ ಓದಿರುವುದಾಗಿ ಹೇಳಿದ ನೆಹರೂರವರು ಅದು ಸದ್ಯದ ಭಾರತದ ಪರಿಸ್ಥಿತಿಗೆ ಅಪ್ರಸ್ತುತವೂ, ಅಪ್ರಾಯೋಗಿಕವೂ ಎಂದು ತಿರಸ್ಕರಿಸುತ್ತಾರೆ. (ಈ ಎರಡು ಪತ್ರಗಳು ಪ್ರಾಯಶಃ ಭಾರತದ ದಿಕ್ಕನ್ನು ನಿರ್ಧರಿಸಿದ, ಆ ಕಾಲದ ಹರಿವನ್ನು ಸೂಚಿಸಿದ ಅತ್ಯಂತ ಮಹತ್ವದ ಪತ್ರಗಳು ಎಂದು ನನ್ನ ಅನಿಸಿಕೆ). ನಂತರ ಕೈಗಾರಿಕೆಗಳೇ ನವ ದೇವಾಲಯಗಳೆಂದೂ, ಅಣೆಕಟ್ಟು ವಿದ್ಯುತ್‌ಗಳೇ ಉನ್ನತಿಯ ಏಕೋಪಾಯಗಳೆಂದು ನಿರ್ಧರಿಸಿ ಭಾರತ ಆ ದಿಕ್ಕಿನತ್ತ ನಡೆಯುತ್ತದೆ.

## ಯಕ್ಷಗಾನದ ಪಾತ್ರಧಾರಿಯ ಅರ್ಥೈಸುವಿಕೆಯಂತೆ ಮಹಾತ್ಮನ ಕುರಿತು ನಮ್ಮ ಅರಿವು

ನಿಜ, ‘ಸಂತಾನಕ್ಕಾಗಿ ಮಾತ್ರ ಕಾಮ; ಬ್ರಹ್ಮಚರ್ಯವೇ ಶ್ರೇಷ್ಠ’ ಎಂಬ ಮಾತುಗಳಿಂದ ಹಿಡಿದು ಅವರ ಹಲವು ತತ್ವಗಳು ಅಪ್ರಾಯೋಗಿಕವೂ, ಅಸಾಧುವೂ ಅನಿಸುತ್ತದೆ. ಹಾಗೆಯೇ ಬದುಕಿನ ಎಲ್ಲ ಸಂಗತಿಗಳ ಕುರಿತು ಖಚಿತವಾದ ಅಭಿಪ್ರಾಯವನ್ನು ಹೊಂದಲು, ಅದನ್ನು ಅಂತೆಯೇ ಯಾವುದೇ ಅನುಮಾನವಿಲ್ಲದೆ ಆತ್ಮಗತವಾಗಿಸಿಕೊಂಡು ಆಚರಿಸಲು ಅವರಿಗೆ ಹೇಗೆ ಸಾಧ್ಯವಾಗುತ್ತಿತ್ತು ಎಂಬ ಅಚ್ಚರಿಯೂ ಮೂಡುತ್ತದೆ. ನೆಹರೂರವರಿಗೆ ಕನಿಷ್ಠಪಕ್ಷ ‘ಹಿಂದ್ ಸ್ವರಾಜ್’ನ ಮೇಲೆ ಸತ್ಯವಿರಬಹುದೆಂಬ ಅನುಮಾನವಾದರೂ ಬಂದಿದ್ದರೆ ಇವತ್ತು ಭಾರತವು ಬೇರೆ ರೀತಿಯಲ್ಲೇ ಇರುತ್ತಿತ್ತಾ ಎಂಬ ಸಂದೇಹವೂ ಮೂಡುತ್ತದೆ. ಅಂತೆಯೇ ಪತ್ರದಲ್ಲಿ ಏನೇ ಬರೆದಿದ್ದರೂ ಗಾಂಧಿಯವರ ಅನುಯಾಯಿಯಾಗಿದ್ದ ನೆಹರೂರವರು ಆ ಅನುಮಾನವಿಲ್ಲದೆ ನಡೆದಿದ್ದು ಸುಳ್ಳು, ಅದರ ನೆರಳಲ್ಲಿ ನಡೆದೂ ಪ್ರವಾಹದ ಗತಿಯನ್ನು ಬದಲಿಸಲು ಅಶಕ್ಯರಾದರಾ ಎಂದೂ ಅನಿಸುತ್ತದೆ. ಇಷ್ಟಕ್ಕೂ ಚರಕದ ಬದುಕು ಸುಲಭವಲ್ಲ ತಾನೇ? ಅಲ್ಲೊಬ್ಬ ಚೇರ್ಕಾಡಿ ರಾಮಚಂದ್ರರಾಯರಿಗೆ ಆಯಿತೆಂದು ಏತದಲ್ಲಿ ನೀರೆತ್ತಿ ಕೃಷಿ ಮಾಡುವುದು ನನಗೆ ಸಾಧ್ಯವೇ?

ನನ್ನ ತಾಯಿ ಗಾಂಧಿ ಅವರಿಗೆ ಸಂಬಂಧಿಸಿದ ಒಂದು ಕಥೆಯನ್ನು ಹೇಳುತ್ತಿದ್ದರು. ಒಮ್ಮೆ ಗಾಂಧೀಜಿಯವರ ಆಶ್ರಮಕ್ಕೆ ಬಂದ ವ್ಯಕ್ತಿ ಅವರೊಡನೆ ಊಟಕ್ಕೆ ಕೂತಿದ್ದರು. ಆಗ ಗಾಂಧಿ ಬೇವಿನ ಪುಡಿಯ ಕಹಿಯನ್ನು ರಸಾಭಿವ್ಯಕ್ತಿಯಲ್ಲಿ ಯಾವ ಬದಲಾವಣೆಯಿಲ್ಲದೆ ಅರಾಮಾಗಿ ತಿಂದರಂತೆ. ಅದನ್ನು ನೋಡಿ ಆ ವ್ಯಕ್ತಿ ಚಕಿತಗೊಂಡರಂತೆ. ರುಚಿ ಎಂಬುದು ನಾಲಿಗೆಯಲ್ಲಿಲ್ಲ, ಮನಸ್ಸಿನಲ್ಲಿದೆ ಎಂಬುದನ್ನು ಗಾಂಧಿ ಆತ್ಮಗತಗೊಳಿಸಿಕೊಂಡಿದ್ದರು ಎಂಬುದನ್ನು ವಿವರಿಸಲು ಅಮ್ಮ ಹೇಳಿದ ಕತೆ ಇದು. ಹೀಗೆ ಇವತ್ತು ಗಾಂಧಿ ಮಕ್ಕಳಿಂದ ಹಿಡಿದು ಎಲ್ಲರನ್ನು ತಲುಪುತ್ತಿರುವುದು ಪುರಾಣದ ಕತೆಗಳಂತೆ, ಬಾಯಿಂದ ಬಾಯಿಗೆ ಬಂದ ದೃಷ್ಟಾಂತಗಳ ಮೂಲಕ. ಗಾಂಧಿಯವರು ಹೇಳಿದ ಶುದ್ಧತೆಯ ಪರಿಕಲ್ಪನೆಗೂ ಇವತ್ತಿನ ಸ್ವಚ್ಛ ಭಾರತಕ್ಕೂ ಎಂತಹ ಸಂಬಂಧವಿದೆಯೋ ಗೊತ್ತಿಲ್ಲ. ಒಂದು ಕಡೆ ಗಾಂಧಿಯವರನ್ನೂ ನಿರಾಕರಿಸುತ್ತಲೂ, ಇನ್ನೊಂದೆಡೆ ಗಾಂಧಿಯವರ ಮಾರ್ಗವನ್ನು ನಾವು ಅನುಸರಿಸುತ್ತೇವೆಂದು ನಿರೂಪಿಸಬೇಕಾದ ಅನಿವಾರ್ಯತೆಗೂ ಒಳಗಾಗುತ್ತ ಇಂದಿನ ರಾಜಕಾರಣ ಪಕ್ಷ ಭೇದವಿಲ್ಲದೆ ನಡೆಯುತ್ತಿದೆ.

ಬಹುಶಃ ಇವತ್ತು ಗಾಂಧಿ ಕೂಡಾ ತಾಳಮದ್ದಲೆಯ ರಾಮ, ಶಿವ, ವಾಲಿ, ರಾವಣರ ಪಾತ್ರಧಾರಿಗಳು ಪಾತ್ರಗಳನ್ನು ಅರ್ಥೈಸಿದಂತೆ. ಕಂಡಷ್ಟು, ದಕ್ಕಿದಷ್ಟು.

ಪ್ರತಿಕ್ರಿಯಿಸಿ: **feedback@sudha.co.in**